# ಕೌತುಕದ ಕೀಟಕೋಶ

ದೀಪಾವಳಿಯಲ್ಲಿ ಮನೆಯ ಮಾಡುಗಳಲ್ಲಿ ತೂಗಾಡುವ ಆಕಾಶ ಬುಟ್ಟಿಯಂತೆ ಕಾಣುವ ಈ ಕೀಟದ ಕೋಶ ನಿಸರ್ಗದ ಕೌತುಕಗಳಲ್ಲಿ ಒಂದು. ಗಿಡದ ಎಲೆ ಅಥವಾ ಕಾಂಡಗಳ ತುದಿಯಲ್ಲಿ ಈ ಕೀಟಗಳು ಮೊಟ್ಟೆಗಳನ್ನು ನೇತಾಡಿ ಬಿಟ್ಟಿರುತ್ತವೆ. ಸುಮಾರು 7–10 ಮಿ.ಮೀ. ಉದ್ದವಿರುವ ಈ ಕೋಶದಿಂದ ಕೀಟವು ಪೊರೆಯನ್ನು ಹರಿದು ಹೊರಗೆ ಬರುತ್ತದೆ. ಕೋಶದ ರಚನೆ, ಬಣ್ಣ ಯಾವ ಕಲಾಕೃತಿಯನ್ನೂ ಮೀರಿಸುವಂತಿದೆ.

ಮಲೆನಾಡಿನ ಬೆಟ್ಟ ಗುಡ್ಡಗಳಲ್ಲಿ ಜೂನ್– ಸೆಪ್ಟೆಂಬರ್‌ವರೆಗೆ ಇವು ನೋಡಲು ಸಿಗುತ್ತವೆ.

**-ಜಿ. ಆರ್.ಪಂಡಿತ್, ಸಾಗರ**





# ಪ್ರಕೃತಿ ಪ್ರಕಟಿಸಿದ ಶ್ವೇತ ಪತ್ರ

ನಿಸರ್ಗವು ವೈವಿಧ್ಯಗಳ ಆಗರವೇ ಆಗಿದೆ. ಹಸಿರು ಎಲೆಗಳ ಜೊತೆ ಜೊತೆಗೆ ಬಿಳಿಯ ಎಲೆಗಳನ್ನು ಬಿಡುವ ಈ ಗಿಡವನ್ನು ಮಲೆನಾಡಿನಲ್ಲಿ ಹಾಗೂ ಕರಾವಳಿಯಲ್ಲಿ ಬೆಳ್ಳಂಡೆ ಅಥವ ರಜತಾರಿ ಎಂದು ಕರೆಯುತ್ತಾರೆ.

ಆಕರ್ಷಣೀಯವಾದ ಈ ಬಿಳಿಯ ಎಲೆಯು ಅರಿಶಿನ ಮುಂಡಿಗೆ (ಕಾಮಾಲೆ) ಕಾಯಿಲೆಗೆ ಉತ್ತಮ ಔಷಧಿ. ಹಸಿರು ಎಲೆಯು ತಲೆಕೂದಲಿಗೆ ಅತ್ಯುತ್ತಮ ಪೋಷಕವಾಗಿದೆ. ನುಣ್ಣಗೆ ಅರೆದ ಎಲೆಯನ್ನು ಕೂದಲಿಗೆ ಹಚ್ಚಿಕೊಂಡು ಅರ್ಧ ಗಂಟೆಯ ನಂತರ ತೊಳೆದುಕೊಂಡರೆ ತಲೆಗೂದಲು ಚೆನ್ನಾಗಿ ಹೊಳೆಯುತ್ತದೆ. ಬಲಿತ ಎಲೆಯನ್ನು ಪಶು ಆಹಾರವನ್ನಾಗಿ ಬಳಸುತ್ತಾರೆ.

**-ಮೀನಾಕ್ಷಿ ಆರ್.ಬಿ., ಉಡುಪಿ**

# ಪುರಾತನ ಇಟಗಿ ದೇವಾಲಯ

ಕಲ್ಯಾಣದ ಚಾಲುಕ್ಯರು ನಿರ್ಮಿಸಿದ ಇಟಗಿಯ ಮಹಾದೇವ ದೇವಾಲಯವಿದು. ಪೂರ್ವಾಭಿಮುಖವಾಗಿರುವ ಮಹಾದೇವ ದೇವಾಲಯವು ಗರ್ಭಗೃಹ, ಅಂತರಾಳ, ಸುಖನಾಸಿ ಮತ್ತು ನವರಂಗವನ್ನು ಹೊಂದಿದೆ. ದೇವಾಲಯದ ನಿರ್ಮಾಣದಲ್ಲಿ ಮರಳುಮಿಶ್ರಿತ ಕೆಂಪುಕಲ್ಲನ್ನು ಹೊರತುಪಡಿಸಿ ಕಪ್ಪುಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಿಕೊಳ್ಳಲಾಗಿದೆ. ಆಕರ್ಷಕ ಗೋಪುರ, ಚಿಕ್ಕಚಿಕ್ಕ ಗೊಂಬೆಗಳು, ಮೂರ್ತಿಗಳು, ಶಿಲಾಬಾಲಿಕೆಯರು ಹಾಗೂ ಡೋಲುಢಮರುಗಗಳನ್ನು ಹಿಡಿದು ನರ್ತಿಸುತ್ತಿರುವ ನರ್ತಕಿಯರು, ರಾಮಾಯಣ ಮತ್ತು ಮಹಾಭಾರತದ ಸನ್ನಿವೇಶಗಳ ಕೆತ್ತನೆಗಳು ಆ ಕಾಲದ ಶಿಲ್ಪಿಗಳ ಕಲಾನೈಪುಣ್ಯತೆಗೆ ಸಾಕ್ಷಿಯಾಗಿವೆ.

ಮಹಾದೇವ ದೇವಾಲಯವು 40 ಅಡಿ ಎತ್ತರವಿದೆ. ಶಿಖರದಲ್ಲಿ ಮೂರು ಅಂತಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. 900 ವರ್ಷಗಳಷ್ಟು ಹಳೆಯದಾದ ಮಹಾದೇವ ದೇವಾಲಯವು ಚತುರ ಅಲಂಕರಣದ ಸುಂದರ ಹೊಳಪು ಕಂಬಗಳು, ಕುಸುರಿ ಕೆಲಸದ ದ್ವಾರಬಂಧಗಳು ಮತ್ತು ಶಿಖರಗಳನ್ನು ಒಳಗೊಂಡ ಮಹೋನ್ನತ ಕೃತಿಯಾಗಿದೆ.

**-ಪ.ನಾ.ಹಳ್ಳಿ.ಹರೀಶ್ ಕುಮಾರ್, ತುಮಕೂರು**

